**ದಿನಾಂಕಃ 27-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ1 ಹಾಗೂ 5 ನೇ ಪ್ರತಿವಾದಿಗಳ ಪರ ಶ್ರೀ ಸಿ ಡಿ ಪಿ ವಕೀಲರಿಂದಃ**

1. ನನ್ನ ಗಂಡನ ತಂದೆಯ ಹೆಸರು ಬಸಪ್ಪ. ಆತನ ಹೆಂಡತಿ ಸುಬ್ಬವ್ವ. ಆತನಿಗೆ 5 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ಬಸಪ್ಪನ ಹೆಣ್ಣು ಮಕ್ಕಳ ಹೆಸರು ದುರ್ಗವ್ವ, ಹಾಲವ್ವ ಮತ್ತು ಗಂಗವ್ವ. ಸದರಿ 3 ಜನ ಮರಣ ಹೊಂದಿದ್ದಾರೆ. ದುರ್ಗವ್ವಳಿಗೆ ಇಬ್ಬರು ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇದ್ದಾರೆ. ಅವರ ಪೈಕಿ ಶಾಂತವ್ವ ಮರಣ ಹೊಂದಿದ್ದು, ಆಕೆಯ ಗಂಡ ಹಾಗೂ ಮಕ್ಕಳು ಇದ್ದಾರೆ. ದುರ್ಗವ್ವಳ ಗಂಡು ಮಕ್ಕಳು ಮರಣಹೊಂದಿದ್ದು, ಅವರ ಹೆಂಡತಿ ಮಕ್ಕಳು ಜೀವಿತ ಇದ್ದಾರೆ. ಅವರನ್ನು ಈ ದಾವೆಯ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ.

**ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ 3 ಗಂಟೆಯವರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

**ದಿನಾಂಕಃ 27-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ1 ಹಾಗೂ 5 ನೇ ಪ್ರತಿವಾದಿಗಳ ಪರ ಶ್ರೀ ಸಿ ಡಿ ಪಿ ವಕೀಲರಿಂದಃ**

2. ಹೊಳಿಯಪ್ಪನಿಗೆ 3 ಗಂಡು ಮಕ್ಕಳು ಹಾಗೂ 3 ಹೆಣ್ಣು ಮಕ್ಕಳು. ಅವರ ಪೈಕಿ ಹಾಲಪ್ಪ ಮರಣ ಹೊಂದಿದ್ದಾನೆ. ಹಾಲಪ್ಪನ ಮಗಳು ಹುಚ್ಚಂಗೆಮ್ಮ ಎಂದರೆ ನಿಜ. ಆಕೆಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ.

3. ದಾವಾ ಆಸ್ತಿಗಳ ಸರ್ವೆ ನಂಬರ್ ಹೇಳಲಾಗುವುದಿಲ್ಲ ಆದರೆ ಒಟ್ಟು 20 ಎಕರೆ ಜಮೀನು ಇದೆ. ಒಟ್ಟು 4 ಮನೆಗಳು ಇದ್ದು, ಅವುಗಳ ನಂಬರ್ ಗೊತ್ತಿಲ್ಲ. ಬಸಪ್ಪನ ಹೆಸರಿನಲ್ಲಿರುವ ಮನೆ ನಂಬರ್ 128 ನೇದ್ದನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ಬಸಪ್ಪನ ಮಕ್ಕಳು ಯಾವಾಗ ಬೇರೆ ಆಗಿದ್ದಾರೆ ಎಂದರೆ ಸಾಕ್ಷಿಯು ಬೇರೆಯಾಗಿಲ್ಲ ಎಲ್ಲರೂ ಕೂಡಿಯೇ ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಬೇರೆ ಬೇರೆಯಾಗಿ ಉಪಭೋಗ ಮಾಡುತ್ತಾರೆ ಎಂದರೆ ಒಂದು ಗೂಡಿ ಉಪಯೋಗಿಸುತ್ತಾರೆ ಎಂದು ನುಡಿಯುತ್ತಾರೆ.

4. ರಿ.ಸ. ನಂಃ 76/3 ರ ಕ್ಷೇತ್ರ ಗೊತ್ತಿಲ್ಲ. ಸದರಿ ಆಸ್ತಿ ರಾಮಪ್ಪನ ಹೆಸರಿನಲ್ಲಿ ಸರ್ಕಾರದಿಂದ ಮಂಜೂರಾಗಿದೆ ಎಂದರೆ ನಿಜ. ಸಾಕ್ಷಿಯು ಆತನಿಗೆ 5 ಜನ ಮಕ್ಕಳು ಇದ್ದಾರೆ ಎಂದು ನುಡಿಯುತ್ತಾರೆ. ರಿ.ಸ. ನಂಃ 76/11 ಇದು ಸರ್ಕಾರಿದಿಂದ ಮಂಜೂರಾಗಿದೆ ಎಂದರೆ ಸಾಕ್ಷಿಯು 5 ಜನರಿಗೆ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಬಸಪ್ಪನ ಜೀವಿತ ಕಾಲದಲ್ಲಿಯೇ ಆತನ ಮಕ್ಕಳು ಬೇರೆಯಾಗಿದ್ದಾರೆ ಎಂದರೆ ಸರಿಯಲ್ಲ .

5. ರಾಮಪ್ಪ ತಹಶೀಲ್ದಾರ ಕಚೇರಿಗೆ ಅರ್ಜಿ ಸಲ್ಲಿಸಿದ್ದ ಎಂದರೆ ನಿಜ. ಸರ್ಕಾರ ಆತನಿಗೆ

ಜಮೀನು ಇಲ್ಲ ಎಂದು ಪರಿಗಣಿಸಿ 3 ಎಕರೆ 35 ಗುಂಟೆ ಜಮೀನನ್ನು ಮಂಜೂರು ಮಾಡಿದೆ ಎಂದರೆ ಸರಿಯಲ್ಲ . ರಿ.ಸ. ನಂಃ 76/11 ರ ಕುರಿತು ಹೋಳಿಯಪ್ಪ ಅರ್ಜಿ ಸಲ್ಲಿಸಿದ್ದ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಹೊಲ-ಮನೆ ಪಾಲು ಆಗಿಲ್ಲ, ಆದರೆ ಅಡುಗೆ ಮಾತ್ರ ಬೇರೆ ಬೇರೆಯಾಗಿ ಮಾಡುತ್ತೇವೆ ಎಂದು ನುಡಿಯುತ್ತಾರೆ. ಅಡುಗೆ ಬೇರೆ ಬೇರೆ ಮಾಡಿಕೊಳ್ಳುವುದಾದರೆ ಹೊಲ-ಮನೆಗಳನ್ನು ಪಾಲು ಮಾಡುತ್ತಾರೆ ಎಂದರೆ ಸರಿಯಲ್ಲ . ರಾಮಪ್ಪ ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದ ಎನ್ನುವುದು ನನಗೆ ಗೊತ್ತಿಲ್ಲ. ದಿಃ 17-10-1960 ರಂದು ರಾಮಪ್ಪ ಅರ್ಜಿ ಸಲ್ಲಿಸಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಸರ್ಕಾರಿ ಅಧಿಕಾರಿಗಳು ಪರಿಶೀಲನೆ ಮಾಡಿ, ರಾಮಪ್ಪನಿಗೆ ಜಮೀನು ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ .

6. ರಾಮಪ್ಪ 10-15 ವರ್ಷಗಳ ಹಿಂದೆ ಮರಣ ಹೊಂದಿದ್ದಾನೆ. ಆತನ ಮರಣ ನಂತರ ಆತನ ಮಕ್ಕಳು ಆಸ್ತಿಗಳಿಗೆ ವಾರ್ಸಾ ಮಾಡಿಕೊಂಡಿದ್ದಾರೆ ಎಂದರೆ ನಿಜ.ರಾಮಪ್ಪನ ಹೆಣ್ಣು ಮಕ್ಕಳು ಪ್ರತಿವಾದಿ ನಂಃ 1 ಮತ್ತು 5 ರವರಿಗೆ ತಮ್ಮ ಹಕ್ಕು ಬಿಟ್ಟುಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. 1 ಹಾಗೂ 5 ನೇ ಪ್ರತಿವಾದಿಯರು ಸದರಿ ಆಸ್ತಿಯ ಆಧಾರದ ಮೇಲೆ ಸಾಲ ಪಡೆದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರ ಜಮೀನಿನಲ್ಲಿ ಅವರು ಬೋರ್ವೆಲ್ ಹಾಕಿಸಿದ್ದಾರೆ ಎಂದು ನುಡಿಯುತ್ತಾರೆ. ಅವರು ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದರೆ ನಿಜ. ಸದರಿ ಜಮೀನಿನಲ್ಲಿ ಗೋವಿನ ಜೋಳ ಹಾಗೂ ವಿಳ್ಯದೆಲೆ ಬೆಳೆಯುತ್ತಾರೆ. ವಿಳ್ಯದೆಲೆಯನ್ನು 2-3 ವರ್ಷಗಳಿಂದ ಬೆಳೆಯುತ್ತಿದ್ದಾರೆ. ರಾಮಪ್ಪನ ಮಕ್ಕಳ ಹೆಸರಿನ್ನು ಆಸ್ತಿಗೆ ವಾರ್ಸಾ ಮಾಡುವ ಸಮಯದಲ್ಲಿ ನೀವು ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಅವರು ನಮಗೆ ಗೊತ್ತಾಗದ ಹಾಗೇ ವಾರ್ಸಾ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

7. ಸರ್ವೆ ನಂಃ 69/1, 42/4 ಹಾಗೂ 42/12 ಇವುಗಳ ಕುರಿತು ಪಾಲು ಆಗಿಲ್ಲ

ಎಂದರೆ ನಿಜ. ಆದರೆ ವಹಿವಾಟು ಪ್ರಕಾರ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ . ರಿ.ಸ. ನಂಃ 76/4 ಇದು 1 ಹಾಗೂ 5 ನೇ ಪ್ರತಿವಾದಿಯ ಹೆಸರಿನಲ್ಲಿ ಮಂಜೂರಾಗಿದೆ ಎಂದರೆ ನಿಜ. ಸದರಿ ಜಮೀನಿನಲ್ಲಿ ಫಕ್ಕೀರಪ್ಪ ಹಾಗೂ ನಾಗಪ್ಪ ತಲಾ 1 ಎಕರೆ 36 ಗುಂಟೆ ಜಮೀನು ಸಾಗುವಳಿ ಮಾಡುತ್ತಾರೆ ಎಂದರೆ ನಿಜ. ಸರ್ವೆ ನಂಃ 76/11 ನೇದ್ದರಲ್ಲಿಯ ಜಮೀನನ್ನು ಹೋಳಿಯಪ್ಪನ ಮಕ್ಕಳು ಸಾಗುವಳಿ ಮಾಡುತ್ತಾರೆ ಎಂದರೆ ನಿಜ. ದಾವಾ ಶೆಡ್ಯೂಲ್ ನಂಃ 1 ರಿಂದ 3 ಆಸ್ತಿಗಳ ಕುರಿತು ಮಾತ್ರ ಒಟ್ಟಾಗಿದ್ದೇವೆ ಎಂದರೆ ನಿಜ . ಆದ್ದರಿಂದ 3 ಆಸ್ತಿಗಳ ಕುರಿತು ಮಾತ್ರ ಎಲ್ಲರಿಗೂ ಪಾಲು ಇದೆ ಎಂದರೆ ನಿಜ.

8. ಬಸಪ್ಪನ ಹೆಸರಿನಲ್ಲಿರುವ ಮನೆಯಲ್ಲಿ ಎಲ್ಲರಿಗೂ ಪಾಲು ಇದೆ ಎಂದರೆ ನಿಜ. ಹುಲಿಕಟ್ಟಿ ಗ್ರಾಮದ ವಿಪಿಸಿ ನಂಃ 129 ಇದು ರಾಮಪ್ಪನ ಹೆಸರಿನಲ್ಲಿದೆ ಎಂದರೆ ನಿಜ. ಹುಲಿಕಟ್ಟಿ ಗ್ರಾಮದ ವಿ ಪಿ ಸಿ ನಂಃ 130 ರಲ್ಲಿರುವ ಮನೆ ಹೊಳಿಯಪ್ಪನ ಹೆಸರಿನಲ್ಲಿದೆ ಎಂದರೆ ನಿಜ. ರಾಮಪ್ಪನ ಹೆಸರಿನಲ್ಲಿರುವ ಆಸ್ತಿಯನ್ನು ಆತನ ಮಕ್ಕಳು ಸ್ವಾಧೀನ ಹೊಂದಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ವಿ ಪಿಸಿ ನಂಃ 130 ರಲ್ಲಿ ಗುಡಿಸಲು ಇದೆ ಎಂದರೆ ಸಾಕ್ಷಿಯು ಹಂಚಿನ ಮನೆಯಿದ್ದು ಅದನ್ನು ಹೊಳಿಯಪ್ಪನ ಮಕ್ಕಳು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಹೊಳಿಯಪ್ಪ ಆತನ ನಂತರ ಅವನ ಮಕ್ಕಳು ಇಂದಿನವರೆಗೂ ವಾಸಿಸುತ್ತಾರೆ ಎಂದರೆ ನಿಜ. ದಾವಾ ಶೆಡ್ಯೂಲ್ ನಂಃ 1 ರಿಂದ 3 ಹಾಗೂ ಬಸಪ್ಪನ ಹೆಸರಿನಲ್ಲಿರುವ ಮನೆಯಲ್ಲಿ ಮಾತ್ರ ಎಲ್ಲರಿಗೂ ಪಾಲು ಇದೆ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳಲ್ಲಿ ಪಾಲು ಇದೆ ಎಂದು ನುಡಿಯುತ್ತಾರೆ.

9. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ನಿಜ . ಅದರಲ್ಲಿರುವ ಬರೆದಿರುವ ವಿಷಯಗಳು ಸುಳ್ಳು ಎನ್ನುವುದು ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.